**ಸಾಕ್ಷಿಯನ್ನು ದಿಃ 18.11.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಪಾಟೀ ಸವಾಲುಃವಾದಿ ಪರ ಶ್ರೀ ಡಿ.ಕೆ.ಆರ್ ವಕೀಲರಿಂದಃ-**

1 ನೇ ವಾದಿಯ ತಂದೆ ತಾಯಿ ನನಗೆ ಗೊತ್ತು. 2 ರಿಂದ 5 ನೇ ವಾದಿಗಳ ತಂದೆ 1 ನೇ ಪ್ರತಿವಾದಿಯಾದ ಪೂಜಾರಿ ಜವರನಾಯಕ ನನಗೆ ಗೊತ್ತಿಲ್ಲ. 2 ರಿಂದ 5 ನೇ ವಾದಿಗಳ ತಾಯಿ ದೇವಮ್ಮ ರವರು ನನಗೆ ಗೊತ್ತು. ಪ್ರತಿವಾದಿ 1(ಎ) ದೇವಮ್ಮ ರವರ ಗಂಡ ನನಗೆ ಗೊತ್ತು. ಅವರು ಹೆಸರು ಜವರ ನಾಯಕ. ಅವರು ದೇವಸ್ಥಾನಗಳಲ್ಲಿ ಪೂಜೆ ಮಾಡುತ್ತಿದ್ದ ಕಾರಣ ಪೂಜಾರಿ ಜವರನಾಯಕ ಎಂದು ಕರೆಯುತ್ತಿದ್ದರು ಎಂದರೆ ಸರಿ. ದಾವೆ ಹಾಕಿದ ನಂತರ ಸದರಿ ರವರು ತೀರಿಕೊಂಡರು ಎಂದರೆ ಸರಿ. 1 ನೇ ವಾದಿ ಅಣ್ಣಯ್ಯನಾಯಕ ರವರ ತಂದೆ ಜವರನಾಯಕ ತುಂಬಾ ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ ಎಂದರೆ ಸರಿ.

2 ರಿಂದ 5 ನೇ ಪ್ರತಿವಾದಿಗಳು ಒಟ್ಟು ಕುಟುಂಬದಲ್ಲಿ ಇರುವುದಿಲ್ಲ, ವಿಭಾಗ ಮಾಡಿಕೊಂಡಿದ್ದೇವೆ. ಆಸ್ತಿಗಳನ್ನು ವಿಭಾಗ ಪತ್ರದ ಮೂಲಕ ವಿಭಾಗ ಮಾಡಿಕೊಂಡಿರುತ್ತೇವೆ, ಉಳಿದ 1 ಎಕರೆ ಮಾತ್ರ ಇನ್ನು ವಿಭಾಗ ಆಗಿಲ್ಲ ಎನ್ನುತ್ತಾರೆ. ದಾವಾ ಸ್ವತ್ತು ಸರ್ವೆ ನಂ. 32 ಐಟಂ ನಂ. 1 ಒಟ್ಟು 3 ಎಕರೆ 5 ಗುಂಟೆಯಲ್ಲಿ 2 ಎಕರೆ ನಮ್ಮ ತಂದೆ ನರಸಿಂಹಶೆಟ್ಟಿರವರಿಗೆ ಈ ಹಿಂದೆ ಕೇವಲ ಭೋಗ್ಯ ಆಗಿತ್ತು ಎಂದರೆ ಸರಿ. ನಮ್ಮ ತಂದೆಗೆ ಸದರಿ ಸ್ವತ್ತಿನ ಮಾಲೀಕತ್ವ ಬಂದಿಲ್ಲ ಎಂದರೆ ಸರಿಯಲ್ಲ. ಸದರಿ 2 ಎಕರೆಯನ್ನು 5 ವರ್ಷಗಳವರೆಗೆ ಭೋಗ್ಯ ಮಾಡಿಕೊಂಡಿದ್ದರು ಎಂದರೆ ಸರಿ. ನಮ್ಮ ತಂದೆ 5 ವರ್ಷಗಳ ವರೆಗೆ ಸದರಿ ಜಮೀನಿನಲ್ಲಿ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿ, ಸಾಕ್ಷಿ ಪುನಃ ಈಗಲೂ ನಾವೇ ಸ್ವಾಧೀನದಲ್ಲಿ ಇದ್ದೇವೆ ಎನ್ನುತ್ತಾರೆ. ನಮ್ಮ ತಂದೆಗೆ ಮಾಲೀಕತ್ವ ಇಲ್ಲದ ಕಾರಣ ನಾವು ಅದರ ಮಾಲೀಕತ್ವ ಹೊಂದಲು ಅರ್ಹರಲ್ಲ ಎಂದರೆ ಸರಿಯಲ್ಲ. ಸದರಿ 2 ಎಕರೆಗೆ 5 ವರ್ಷಗಳ ನಂತರ ಭೋಗ್ಯ ಮುಗಿದಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸಿ ಹಣ ಕೊಟ್ಟ ನಂತರ ಭೋಗ್ಯ ಮುಗಿಯುತ್ತದೆ ಎನ್ನುತ್ತಾರೆ. ಆ ರೀತಿಯ ಒಕ್ಕಣೆ ಭೋಗ್ಯ ಪತ್ರದಲ್ಲಿ ಇರುತ್ತದೆ. ನನ್ನ ತಂದೆ ಭೋಗ್ಯಕ್ಕೆ ಹಾಕಿಸಿಕೊಂಡಾಗ 5 ವರ್ಷಕ್ಕೆ ಸೀಮಿತವಾಗಿತ್ತು ಎಂದರೆ ಸರಿ, ಸಾಕ್ಷಿ ಹಾಗೆ ಹಣಕೊಟ್ಟ ನಂತರ ಭೋಗ್ಯ

ಮುಗಿಯುತ್ತದೆ ಎಂದು ನುಡಿಯುತ್ತಾರೆ. ಭೋಗ್ಯದ ಅವಧಿ 5 ವರ್ಷಗಳಿಗೆ ಮುಗಿದಿತ್ತು ಎಂದು ನೋಟೀಸು ಕೊಟ್ಟಿಲ್ಲ, ಆದರೆ ಅವರೂ ಕೂಡ ಬಂದಿಲ್ಲ ಎನ್ನುತ್ತಾರೆ.

ಜವರನಾಯಕ ಮತ್ತು ಪೂಜಾರಿ ಜವರನಾಯಕ ರವರ ತಂದೆ ಕುಣಿಯನ ಜವರನಾಯಕ ನನಗೆ ಗೊತ್ತಿಲ್ಲ. ದಾವಾ ಐಟಂ ನಂ.1 ರ ಸ್ವತ್ತಿನ 2 ಎಕರೆ ಜಮೀನು ಮೂಲತಃ ಯಾರಿಗೆ ಸೇರಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ದಾವಾ ಸ್ವತ್ತು ವಾದಿಯವರಿಗೆ ಅವರ ಹಿರಿಯರಿಂದ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ ನಂ.1 ರ ಸ್ವತ್ತು 3 ಎಕರೆ ಪೈಕಿ 2 ಎಕರೆ ಹೊರತು ಪಡಿಸಿ 1 ಎಕರೆ 5 ಗುಂಟೆ ಕುಣಿಯನ ಜವರನಾಯಕ ರವರ ಹೆಸರಿನಲ್ಲಿ ಇದೆ. ಕುಣಿಯನ ಜವರನಾಯಕ ನವರಿಗೆ ಜವರನಾಯಕ ಮತ್ತು ಪೂಜಾರಿ ಜವರನಾಯಕ ಎಂಬ ಇಬ್ಬರು ಮಕ್ಕಳು ಎಂದು ನನಗೆ ಗೊತ್ತು ಎಂದು ನುಡಿದು, ನಂತರ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನನ್ನ ತಂದೆ ಭೋಗ್ಯ ಮಾಡಿಕೊಂಡರು ಎಂದು ಹೇಳುವ ಸಮಯದಲ್ಲಿ ಜಮೀನು ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ದಾವಾ ಹಾಕುವ ಸಮಯದಲ್ಲಿ ಸದರಿ ಜಮೀನು ಯಾರ ಹೆಸರಿನಲ್ಲಿ ಇತ್ತು ಎಂದು ಮಾಹಿತಿ ತಿಳಿದುಕೊಂಡಿದ್ದೆ. ಅದು 1 ನೇ ಪ್ರತಿವಾದಿ ಹೆಸರಿನಲ್ಲಿ ಇತ್ತು. 1975 ನೇ ಸಾಲಿನಲ್ಲಿ 1 ನೇ ಪ್ರತಿವಾದಿ ಹೆಸರಿನಲ್ಲಿ ಜಮೀನು ಇತ್ತು ಎಂದು ತೋರಿಸಲು ಆರ್.ಟಿ.ಸಿ ಹಾಜರು ಪಡಿಸಿದ್ದೇನೆ. ನಾನು ಹಾಜರು ಪಡಿಸಿರುವ ದಾಖಲೆಗಳಲ್ಲಿ ಸದರಿ ಆರ್.ಟಿ.ಸಿ ಇರುವುದಿಲ್ಲ.

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನಿಪಿ. 9 ರ ಆರ್.ಟಿ.ಸಿ ಸರ್ವೆ ನಂ. 32 ಕ್ಕೆ ಸಂಬಂಧಿಸಿದ್ದು, ಅದು ಕುಣಿಯನ ಜವರನಾಯಕನ ಹೆಸರಿನಲ್ಲಿ ಇತ್ತು. 1975 ನೇ ಪೂರ್ವದಿಂದಲೂ ಸದರಿ ಜಮೀನು ಕುಣಿಯನ ಜವರನಾಯಕನ ಹೆಸರಿನಲ್ಲಿ ಇರುವುದು ನನಗೆ ಗೊತ್ತು. 1970 ರಿಂದ 1975 ನೇ ಸಾಲಿನ ವರೆಗೆ ಕುಣಿಯನ ಜವರನಾಯಕ ಜೀವಂತ ಇದ್ದರೋ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ತಂದೆ ಭೋಗ್ಯ ಮಾಡಿಕೊಳ್ಳುವ ಕಾಲಕ್ಕೆ ಪೂಜಾರಿ ಜವರನಾಯಕ ರವರು ಮಾಡಿಕೊಟ್ಟಿರುತ್ತಾರೆ. ಆ ಸಂದರ್ಭದಲ್ಲಿ

ದಾವಾ ಐಟಂ ನಂ.1 ರ ಸ್ವತ್ತಿಗೆ ಸಂಬಂಧಿಸಿದಂತೆ ರೆವಿನ್ಯೂ ದಾಖಲೆಗಳು ಪೂಜಾರಿ ಜವರನಾಯಕ ರವರ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿ.1975 ರಲ್ಲಿ ತಂದೆ ಭೋಗ್ಯ ಮಾಡಿಸಿಕೊಳ್ಳುವ ಕಾಲದಲ್ಲಿ ಪೂಜಾರಿ ಜವರ ನಾಯಕ ರವರ ಹೆಸರಿನಲ್ಲಿ ಇದ್ದ ರೆವಿನ್ಯೂ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಸದರಿ ಜಮೀನಿಗೆ 1974-75 ನೇ ಸಾಲಿನಲ್ಲಿ 1 ನೇ ವಾದಿ ಮತ್ತು 1 ನೇ ಪ್ರತಿವಾದಿಗೆ ಹಕ್ಕು ಇತ್ತು ಎಂದರೆ ಸರಿ. ಹಕ್ಕು ಇರುವ ವ್ಯಕ್ತಿಗಳು ಮಾತ್ರ ಭೋಗ್ಯ ಮಾಡಿಕೊಳ್ಳಬೇಕು ಎಂದರೆ ಸರಿ. 1 ನೇ ವಾದಿಯಿಂದ ನಮ್ಮ ತಂದೆಗೆ ಯಾವುದೆ ಭೋಗ್ಯ ಆಗಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಯಿಂದ ನನ್ನ ತಂದೆಗೆ ಭೋಗ್ಯ ಮಾಡಲು ಯಾವುದೆ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ.

ದಿಃ 30.03.2013 ರಂದು ದಾವಾ ಸ್ವತ್ತು ಐಟಂ ನಂ. 1 ರ ಖಾತೆ ನಮ್ಮ ತಂದೆ ಹೆಸರಿಗೆ ಆಗಿರುತ್ತದೆ. ನನ್ನ ತಂದೆಯ ಜೀವಿತಾವಧಿಯಲ್ಲಿ 1 ನೇ ಪ್ರತಿವಾದಿ ಭೋಗ್ಯದ ಹಣವನ್ನು ಹಿಂತಿರುಗಿಸಿದ್ದರು ಎಂದರೆ ಕೊಟ್ಟಿಲ್ಲ ಎನ್ನುತ್ತಾರೆ.1985 ರಿಂದ 1988 ನೇ ಸಾಲಿನವರೆಗೂ ನನ್ನ ತಂದೆ ಮಾಡುತ್ತಿದ್ದ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ಅದೆ ರೀತಿ ಭೋಗ್ಯ ಮಾಡಿಕೊಂಡ ನಂತರದ 10 ವರ್ಷದ ಅವಧಿಯಲ್ಲಿ ತಂದೆ ಏನು ವ್ಯವಹಾರ ಮಾಡಿದ್ದರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ರವರು ತೀರಿಹೋದ ನಂತರ ಸದರಿ ವ್ಯವಹಾರದ ಬಗ್ಗೆ ಮಾಹಿತಿ ಬಂತು ಎಂದರೆ ಸರಿ. ನಮ್ಮ ತಂದೆ ಮಾಡುತ್ತಿದ್ದ ವ್ಯವಹಾರದ ಬಗ್ಗೆ ಮಾಹಿತಿ ಇಲ್ಲದ ಕಾರಣ ಹಾಗೆ ಭೋಗ್ಯ ಮಾಡಿಕೊಂಡು ಹಣವನ್ನು ವಾಪಸ್ಸು ನೀಡಿದ ಬಗ್ಗೆಯೂ ಮಾಹಿತಿ ಇಲ್ಲ ಎಂದರೆ ಸರಿಯಲ್ಲ, ಆದರೆ ನನ್ನ ತಂದೆ ಜೀವಂತ ಇರುವಾಗ ಭೋಗ್ಯ ಮಾಡಿಕೊಂಡಿರುವುದನ್ನು ಹಣ ಕೊಟ್ಟು ಬಿಡಿಸಿಕೊಳ್ಳದೆ ಇರುವ ವಿಚಾರವನ್ನು ತಿಳಿಸಿದ್ದರು ಎನ್ನುತ್ತಾರೆ.

ದಾವಾ ಐಟಂ ನಂ. 1 ನೇ ಸ್ವತ್ತಿನಲ್ಲಿ ವಾದಿಗಳು ಪ್ರಸುತ್ತ ವರ್ಷದಲ್ಲಿ ಏನು ಬೆಳೆದಿದ್ದಾರೆ ಎಂದು ನಿಮಗೆ ಗೊತ್ತಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಜಮೀನನ್ನು ನಾವೆ ಉಳುಮೆ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ಉಪ ವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ತಂದೆ ತೀರಿಕೊಂಡ ನಂತರ ನಾನೆ ಹಾಜರಾಗುತ್ತಿದ್ದೆ. ಉಪ ವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ಅಣ್ಣಯ್ಯ ನಾಯಕರವರು ಅರ್ಜಿಯನ್ನು ಹಾಕಿದ್ದರು. ಸದರಿ

ಅರ್ಜಿಯನ್ನು ಕುಣಿಯನ ಜವರನಾಯಕ ರವರು ಹಾಕಿದ್ದರು ಎಂದರೆ ಸರಿ. 2013-14 ನೇ ಸಾಲಿನಲ್ಲಿ ಕುಣಿಯನ ಜವರನಾಯಕ ರವರು ಬದುಕಿದ್ದರು. 2013-14 ನೇ ಸಾಲಿನಲ್ಲಿ ಪೂಜಾರಿ ಜವರನಾಯಕ ರವರು ಬದುಕಿದ್ದರು. ಸಾಕ್ಷಿ ಪುನಃ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪೂಜಾರಿ ಜವರನಾಯಕ ರವರು ಹಲವಾರು ವಿಷಯಗಳ ಜೊತೆ ಸಹಕಾರ ಕೊಡುತ್ತಾ ಇದ್ದರು ಎಂದರೆ ಸರಿಯಲ್ಲ. ವಾದಿಗಳು ಅವರ ಪಿತ್ರಾರ್ಜಿತ ಸ್ವತ್ತುಗಳಲ್ಲಿ ಭಾಗ ತೆಗೆದುಕೊಳ್ಳಲು ನನಗೇನು ಅಭ್ಯಂತರ ಇಲ್ಲ, ಸಾಕ್ಷಿ ಮುಂದುವರೆದು ನಮ್ಮ 2 ಎಕರೆ ಬಿಟ್ಟು ತೆಗೆದುಕೊಳ್ಳಲು ಅಭ್ಯಂತರ ಇಲ್ಲ ಎನ್ನುತ್ತಾರೆ. 2 ಎಕರೆ ನಮ್ಮ ಮಾಲೀಕತ್ವದಲ್ಲಿ ಇದೆ ಎಂದು ತೋರಿಸಲು ಭೋಗ್ಯ ಪತ್ರವನ್ನು ಹಾಜರು ಪಡಿಸಿದ್ದೇನೆ. ಸದರಿ ಪತ್ರದಲ್ಲೆ ನಮಗೆ ಹಕ್ಕು ಬಂದಿದೆ ಎಂದು ನುಡಿಯುತ್ತಾರೆ. ನಮ್ಮ ತಂದೆ ಬದುಕಿದ್ದಾಗ ಕೇವಲ ಭೋಗ್ಯದಾರರಾಗಿ ಸದರಿ ಸ್ವತ್ತಿನ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿ. ನನ್ನ ತಂದೆಯ ಅವರ ಜೀವಿತಾ ಕಾಲದಲ್ಲಿ ಭೋಗ್ಯ ಹಣ ಪಡೆದಿದ್ದರಿಂದ ಭೋಗ್ಯದ ಅವಧಿ ಬಿಡುಗಡೆ ಆಗಿತ್ತು ಎಂದರೆ ಸರಿಯಲ್ಲ. ಈ ದಾವೆಯನ್ನು ಹಾಕುವ ಪೂರ್ವದಲ್ಲಿ ಮಾಲೀಕತ್ವದ ಬಗ್ಗೆ ಯಾವುದೆ ದಾವೆ ಹಾಕಿಲ್ಲ. ಹಾಗೆ ಮಾಲೀಕತ್ವ ನಮ್ಮ ಬಳಿ ಇದೆ ಎಂದು ಘೋಷಣೆ ಕೋರಿ ದಾವೆ ಹಾಕಲು ಯಾವುದೆ ತೊಂದರೆ ಇರಲಿಲ್ಲ. ಎ.ಸಿ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸುವಾಗ ದಾವಾ ಸ್ವತ್ತಿನ 2 ಎಕರೆ ಜಮೀನು ನಮ್ಮ ಮಾಲೀಕತ್ವದಲ್ಲಿ ಇದೆ ಎಂದು ಹೇಳಿಲ್ಲ. ನನಗಾಗಲಿ, ನನ್ನ ತಂದೆಗಾಗಲಿ ಮಾಲೀಕತ್ವದ ಹಕ್ಕು ಇಲ್ಲದ ಕಾರಣ ಆ ರೀತಿ ತಕರಾರು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ವಾದಿಗಳು ಸದರಿ ದಾವಾ ಸ್ವತ್ತಿನ ಮಾಲೀಕರಾದ ವಿಭಜನೆ ಮಾಡಿಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.